**ಎರಡನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ .ಎಂ. ಎಫ್ .ಸಿ. ಕನಕಪುರ.**

**C.C. 1046/2025**

CW-4 PW-4

| | | |
|---|---|---|
| ಹೆಸರು | ಃ | ಮಂಜುನಾಥ ಎಂ |
| ತಂದೆಯ ಹೆಸರು | ಃ | ಬಸವರಾಜು |
| ವಯಸ್ಸು | ಃ | 48 ವರ್ಷ |
| ಉದ್ಯೋಗ | ಃ | ಅರಣ್ಯ ಇಲಾಖೆಯ ಚಾಲಕ |
| ವಾಸ | ಃ | ಹಾರೋಹಳ್ಳಿ ವಲಯ |

**ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ ದಿನಾಂಕ 21.05.2026.**

ನಾನು 1997 ರಿಂದ 2019 ವರೆಗೆ ಹಾರೋಹಳ್ಳಿ ಅರಣ್ಯ ವಲಯದಲ್ಲಿ ಚಾಲಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ .

ದಿನಾಂಕ 07.07.2016 ರಂದು ಚಾಸಾ-5 ರವರ ಹೇಳಿಕೆಯ ಮೇರೆಗೆ ಬೆಳಿಗ್ಗೆ 4.30 ಸಮಯಕ್ಕೆ ಚಾಸಾ-1 ರಿಂದ 3 ರವರು ಹಾಗೂ ನಾನು ಗಸ್ತು ಮಾಡುತ್ತಿರುವಾಗ ಟಾರ್ಚ್ ಬೆಳಕು ಕಾಣಿಸುತ್ತದೆ . ನಾವು ಅಲ್ಲೇ ಮರೆಯಲ್ಲಿ ನಿಂತು ನೋಡಲಾಗಿ ಶಿವಮಾದು ಮತ್ತು ಬಸವರಾಜು ಅವಿತುಕೊಂಡು ಕುಳಿತಿರುವುದನ್ನು ಗಮನಿಸಿರುತ್ತೇವೆ. ಶಿವಮಾದನನ್ನು ಹಿಡಿದುಕೊಂಡಿರುತ್ತೇವೆ , ಬಸವರಾಜು ತಪ್ಪಿ ಸಿಕೊಂಡಿರುತ್ತಾರೆ. ಚಾಸಾ-1 ರವರು ಸ್ಥಳದಲ್ಲೇ ಮಹಜರ್ ಅನ್ನು ಮಾಡಿ ಆರೋಪಿ 1 ರವರನ್ನು ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ. ಮಹಜರ್ ಅನ್ನು ಬೆಳಿಗ್ಗೆ 5.15 ರಿಂದ 6.00 ಗಂಟೆ ವರೆಗೆ ಮಾಡಿರುತ್ತಾರೆ. ಸ್ಥಳದಿಂದ ಬಂದೂಕು ಮತ್ತು ಹಳೆಯ ಬ್ಯಾಟರಿಯನ್ನು ವಶಪಡಿಸಿಕೊಂಡಿರುತ್ತೇವೆ.

ಸಾಕ್ಷಿದಾರರು ನಿಪಿ-1 ರಲ್ಲಿರುವ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಡಿ ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದಿರುವ ಬ್ಯಾಟರಿ ಮತ್ತು ನಾಡ ಬಂದೂಕನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿದಾರು ನ್ಯಾಯಾಲಯದ ಮುಂದಿರುವ ಆರೋಪಿ 1 ರವರನ್ನು ಗುರುತಿಸುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಎಂ . ಎಂ ವಕೀಲ ರಿಂದ ಃ**

03.07.2016 ರಂದು ನಿಮ್ಮ ಕೆಲಸದ ಅವಧಿ ಎಷ್ಟು ಗಂಟೆಯಿಂದ ಪ್ರಾರಂಭವಾಗಿತ್ತು ಎಂಬ ಪ್ರಶ್ನೆಗೆ ಸಾಕ್ಷಿದಾರರು ರಾತ್ರಿ 9.00 ಗಂಟೆಯಿಂದ ಪ್ರಾರಂಭವಾಗಿತ್ತು ಎಂದು ನುಡಿಯುತ್ತಾರೆ. ಕಛೇರಿಯನ್ನು ಬಿಟ್ಟಾಗ 9.30 ಆಗಿತ್ತು. ಗಸ್ತು ಮಾಡಲು 4 ಜನ ಹೋಗಿದ್ದೆವು . ಅರಣ್ಯ ವಲಯಕ್ಕೆ ಹೋದಾಗ ರಾತ್ರಿ 12.00 ಗಂಟೆ ಆಗಿತ್ತು. ನೆಡುತೋಪು ನೀಲಗಿರಿ ಮರಗಳಿರುವ ಸ್ಥಳ ಎಂದರೆ ಸರಿ . ಅರಣ್ಯ ಪ್ರದೇಶ ಅಗ್ಗು ತಗ್ಗು ಇರುವ ಜಾಗ ಎಂದರೆ ಸರಿ .

ಗಸ್ತಿಗೆ ಹೋಗುವಾಗ ಬೆಳಕಿನ ವ್ಯವಸ್ಥೆಗಾಗಿ ನಾವು ಏನೂ ಮಾಡಿಕೊಂಡಿರಲಿಲ್ಲ. ನಾವು ಜೀಪಿನಲ್ಲಿ ಹೋಗುತ್ತಿರುವಾಗ ಬೆಳಕನ್ನು ನೋಡಿರುತ್ತೇವೆ. 100 ಮೀಟರ್ ಅಂತರದಲ್ಲಿ ಬೆಳಕು ಕಾಣಿಸುತ್ತಿತ್ತು. ನಾವು ಬೆಳಕು ಕಂಡ ತಕ್ಷಣ ಜೀಪನ್ನು ನಿಲ್ಲಿಸಿ ನಡೆದುಕೊಂಡು ಆರೋಪಿ ಕಡೆ ಹೋಗಿ ರುತ್ತೇವೆ. ಬೆಳಕು ಕಂಡಾಗ 4 ಗಂಟೆ ಆಗಿತ್ತು. 4 ಗಂಟೆ ಆದ ಕಾರಣ ಒಬ್ಬರ ಮುಖ ಒಬ್ಬರಿಗೆ ಕಾಣಿಸುತ್ತಿರಲಿಲ್ಲ ಎಂದರೆ ಸರಿ . ನಾನು ಜೀಪ್ ಬಳಿ ಇದ್ದೆ .

ಚಾಸಾ-2 ಮತ್ತು 3 ಬೆಳಕಿನ ಬಳಿ ಇದ್ದರು. ವೀರಭದ್ರಯ್ಯ ಮತ್ತು ಕಾಳನಾಯಕ ಇಬ್ಬರೂ ಸೇರಿ ಆರೋಪಿಗಳನ್ನು ಹಿಡಿದಿರುತ್ತಾರೆ. ನಮ್ಮ ಜೀಪಿಗೂ, ಆರೋಪಿ ಇರುವ ಸ್ಥಳಕೂ 100 ಮೀಟರ್ ಇತ್ತು. ಆರೋಪಿ 2 ರವರ ಕೈಯಲ್ಲಿ ಗನ್ ಹಾಗೂ ಹಣೆಯಲ್ಲಿ ಬ್ಯಾಟರಿ ಇತ್ತು. ಆರೋಪಿ 2 ರವರು ನಮ್ಮನ್ನು ನೋಡಿ ಗನ್ ಮತ್ತು ಬ್ಯಾಟರಿಯನ್ನು ಸ್ಥಳದಲ್ಲಿ ಬಿಟ್ಟು ಓಡಿ ಹೋಗಿರುತ್ತಾನೆ. ನೀವು ಅವರನ್ನು ಓಡಿಸಿಕೊಂಡು ಹೋಗಿ ಹಿಡಿಯಲು ಪ್ರಯತ್ನ ಪಟ್ಟಿರುತ್ತೇವೆ. ಚಾಸಾ-2 ಮತ್ತು 3 ರವರು ಆರೋಪಿ 2 ರವರನ್ನು ಹಿಡಿಯಲು ಪ್ರಯತ್ನ ಪಟ್ಟಿರುತ್ತಾರೆ.

ನಾಡಬಂದೂಕು ಮತ್ತು ಬ್ಯಾಟರಿಯನ್ನು ನಮ್ಮ ಸಿಬ್ಬಂದಿ ಜೀಪ್ ಬಳಿ ತಂದಿರುತ್ತಾರೆ. ಜೀಪ್ ಬಳಿ ಬರವಣಿಗೆಯನ್ನು ನಮ್ಮ ಅಧಿಕಾರಿಗಳು ಮಾಡಿರುತ್ತಾರೆ. ನಾನು ಮಹಜರ್ ಗೆ ಸಹಿ ಮಾಡಿರುತ್ತೇನೆ. ಮು.ಮಾ. 2 ಕೈ ಬ್ಯಾಟರಿಯಾಗಿದ್ದು Switch ಇರುವುದಿಲ್ಲ ಎಂದರೆ ಸರಿ . ಕೈ

ಬ್ಯಾಟರಿಯನ್ನು ತುಂಡು ಮಾಡಿ ಬಳಸಲಾಗಿದೆ ಎಂದರೆ ಸರಿ . ಹಣೆಯ ಬ್ಯಾಟರಿಗೆ ಪಟ್ಟಿ ಇರುತ್ತದೆ ಎಂದರೆ ಸರಿ . ಮು.ಮಾ. 2 ಕ್ಕೆ ಯಾವುದೇ ರೀತಿಯ ಪಟ್ಟಿ ಇರುವುದಿಲ್ಲ ಎಂದರೆ ಸರಿ , ಸಾಕ್ಷಿದಾರರು ಮುಂದುವರೆದು ಹಣೆಗೆ ಕಟ್ಟಿಕೊಂಡಿದ್ದರು ಎಂದು ನುಡಿಯುತ್ತಾರೆ.

ಮು.ಮಾ. 1 ರಲ್ಲಿ ಮದ್ದು , ಗುಂಡು ಇತ್ತು ಎಂದು ಚೆಕ್ ಮಾಡಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಮು.ಮಾ. 1 ಕೆಲಸಕ್ಕೆ ಬರದೇ ಇರುವ ವಸ್ತು ಎಂದರೆ ಸಾಕ್ಷಿದಾರರು 10 ವರ್ಷಗಳ ಹಿಂದೆ ಚಾಲ್ತಿಯಲ್ಲಿತ್ತು ಎಂದು ನುಡಿಯುತ್ತಾರೆ. ಮು.ಮಾ. 1 ಮತ್ತು 2 ಕ್ಕೆ ನಿಮ್ಮ ಸಹಿ ಪಡೆದಿರುತ್ತಾರಾ ಎಂದರೆ ಸಾಕ್ಷಿದಾರರು ಇಲ್ಲ ಎಂದು ನುಡಿಯುತ್ತಾರೆ. ಮು.ಮಾ. 1 ಮತ್ತು 2 ನಿಮ್ಮ ಕಛೇರಿಯಲ್ಲಿ ಇದ್ದ ವಸ್ತುಗಳು , ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ನೀವು ಆ ದಿನ ಗಸ್ತಿಗೆ ಹೋಗಿರಲಿಲ್ಲ ಆರೋಪಿಯನ್ನು ಹಿಡಿದಿರುವುದಿಲ್ಲ ಎಂದರೆ ಸರಿಯಲ್ಲ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಜೀಪ್ ಬಳಿ ಸಹ ಮಹಜರ್ ಮಾಡಿರುವುದಿಲ್ಲ , ಕಛೇರಿಯಲ್ಲಿ ತಯಾರಿಸಿರುತ್ತೀರಿ ಎಂದರೆ ಸರಿಯಲ್ಲ. ಈ ಪ್ರಕರಣಕ್ಕಾಗಿ ಆರೋಪಿ 2 ರವರನ್ನು ಮನೆಯಲ್ಲಿ ಸುಮ್ಮನೆ ಬಂಧನ ಗೊಳಪಡಿಸಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿಗಳಿಗೆ ತೊಂದರೆ ಆಗಲಿ ಎಂದು ತಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ